ಸೃಜನಿ

I S S N: 2583-3510

SIRDF JOURNALS

editor@srujani.in
www.srujani.in

**SRUJANI: Indian Journal of Innovative Research and Development (SIJIRD)**
Volume-2 Issue 1, March-April 2023, Pp. 125-128
Bi-Monthly, Peer-Reviewed, Open Access, Indexed Journal

# ಗ್ರಾಮೀಣ ಪ್ರದೇಶದಲ್ಲಿ ಅನೌಪಚಾರಿಕ ಹಣಕಾಸಿನ ವ್ಯವಹಾರ

**ಮೀನಪ್ಪ ಅಳ್ಳಿಚಂಡಿ[1] & ಡಾ. ಪಟೇಲ ನಾಗರಾಜಗೌಡ[2]**
[1]ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
[2] ಸಹಾಯಕ ಪ್ರಾಧ್ಯಾಪಕರು, ವೀರೇಂದ್ರ ಪಾಟೀಲ್ ಪದವಿ ಕಾಲೇಜು, ಸದಾಶಿವನಗರ, ಬೆಂಗಳೂರು

**Abstract:**
*ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಹಣಕಾಸು ವ್ಯವಸ್ಥೆಗಳು ತುಂಬಾ ಮಹತ್ವವಾದ ಪಾತ್ರವನ್ನು ವಹಿಸುತ್ತವೆ. ಅಭಿವೃದ್ಧಿಶೀಲ ಆರ್ಥಿಕತೆಯ ಗ್ರಾಮೀಣ ಅಭಿವೃದ್ಧಿ ದರವನ್ನು ದ್ವಿಗುಣಗೊಳಿಸಲು ಎರಡು ಹಣಕಾಸಿನ ಕ್ಷೇತ್ರಗಳನ್ನು ಪರೀಕ್ಷೆಗೆ ಒಳಪಡಿಸಿ ಮತ್ತು ವಿಶ್ಲೇಷಿಸಿ ಪ್ರೋತ್ಸಾಹಿಸಬೇಕಾಗುತ್ತದೆ. ಅದರಲ್ಲಿ ಅನೌಪಚಾರಿಕ ಗ್ರಾಮೀಣ ಹಣಕಾಸು ವ್ಯವಸ್ಥೆಯು ಕೂಡ ಒಂದು. ಅನೌಪಚಾರಿಕ ಗ್ರಾಮೀಣ ಹಣಕಾಸು ವ್ಯವಸ್ಥೆಯು ಸಮಾಜದ ಸಮುದಾಯವನ್ನು ಬಲಪಡಿಸಲು ಮತ್ತು ಗ್ರಾಮೀಣ ಜೀವನೋಪಾಯವನ್ನು ಸುಧಾರಿಸಲು ಪ್ರಮುಖ ಪಾತ್ರ ವಹಿಸುತ್ತದೆ. ಪ್ರಸ್ತುತ ಲೇಖನದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಅನೌಪಚಾರಿಕ ಹಣಕಾಸಿನ ವ್ಯವಹಾರವನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಯನದಲ್ಲಿ ಅನೌಪಚಾರಿಕ ಗ್ರಾಮೀಣ ಹಣಕಾಸು ಎಂದರೆ ಗ್ರಾಮೀಣ ಸಾಲ ಎಂದು ಪರಿಭಾವಿಸಲಾಗಿದೆ.*

**Keywords:** *ಗ್ರಾಮೀಣ ಪ್ರದೇಶ, ಗ್ರಾಮೀಣ ಹಣಕಾಸು, ಅನೌಪಚಾರಿಕ ಹಣಕಾಸು ವ್ಯವಹಾರ.*

## ಪೀಠಿಕೆ

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಹಣಕಾಸು ವ್ಯವಸ್ಥೆಗಳು ತುಂಬಾ ಮಹತ್ವವಾದ ಪಾತ್ರವನ್ನು ವಹಿಸುತ್ತವೆ. ಅಭಿವೃದ್ಧಿಶೀಲ ಆರ್ಥಿಕತೆಯ ಗ್ರಾಮೀಣ ಅಭಿವೃದ್ಧಿ ದರವನ್ನು ದ್ವಿಗುಣಗೊಳಿಸಲು ಎರಡು ಹಣಕಾಸಿನ ಕ್ಷೇತ್ರಗಳನ್ನು ಪರೀಕ್ಷೆಗೆ ಒಳಪಡಿಸಿ ಮತ್ತು ವಿಶ್ಲೇಷಿಸಿ ಪ್ರೋತ್ಸಾಹಿಸಬೇಕಾಗುತ್ತದೆ. ಅದರಲ್ಲಿ ಅನೌಪಚಾರಿಕ ಗ್ರಾಮೀಣ ಹಣಕಾಸು ವ್ಯವಸ್ಥೆಯು ಕೂಡ ಒಂದು. ಗ್ರಾಮೀಣ ಆರ್ಥಿಕತೆಯಲ್ಲಿ ರೈತರ ಸಾಲ ಋಣಭಾರ ಮತ್ತು ಕೃಷಿ ಸಮಸ್ಯೆಗಳು ಪ್ರಮುಖವಾದ ವಿಷಯಗಳಾಗಿದ್ದು, ಈ ಸಮಸ್ಯೆಗಳು ರೈತ ಸಮುದಾಯಕ್ಕೆ ಸೀಮಿತವಾಗಿರದೆ ಅಸಂಘಟಿತ ಕೃಷಿಯೇತರ ವಲಯಕ್ಕೆ ಸಂಬಂಧಿಸಿದೆ. ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಸರಿಯಾದ ಕಾಲಕ್ಕೆ ಸರಿಯಾದ ಪ್ರಮಾಣದಲ್ಲಿ ಹಣಕಾಸು ಲಭಿಸಿದರೆ ಗ್ರಾಮೀಣ ಆರ್ಥಿಕ ಚಟುವಟಿಕೆಗಳು ಆರ್ಥಿಕಾಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತದೆ.

ಈ ಅಧ್ಯಯನದಲ್ಲಿ ಅನೌಪಚಾರಿಕ ಗ್ರಾಮೀಣ ಹಣಕಾಸು ಎಂದರೆ ಗ್ರಾಮೀಣ ಸಾಲ ಎಂದು ಪರಿಭಾವಿಸಲಾಗಿದೆ. ಇದು ಗ್ರಾಮೀಣ ಸಾಲ ಪೂರೈಕೆ ವ್ಯವಸ್ಥೆಗೆ ಸಂಬಂಧಿಸಿದ್ದಾಗಿದೆ. ಕೃಷಿ ಕ್ಷೇತ್ರಕ್ಕೆ ಪೂರೈಕೆಯಾಗುವ ಸಾಲವನ್ನು ಕುರಿತು ಮಾತ್ರ ಚರ್ಚಿಸಲಾಗಿದೆ. ಇದೊಂದು ಪ್ರಾಯೋಗಿಕ ಅಧ್ಯಯನವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಬಾಗಲಕೋಟೆ ಜಿಲ್ಲೆಯ ಆಯ್ದ ಪ್ರದೇಶಗಳನ್ನು ಕ್ಷೇತ್ರಕಾರ್ಯಕ್ಕೆ

**Please cite this article as:** ಮೀನಪ್ಪ ಅಳ್ಳಿಚಂಡಿ & ಪಟೇಲ ನಾಗರಾಜಗೌಡ. (2023). ಗ್ರಾಮೀಣ ಪ್ರದೇಶದಲ್ಲಿ ಅನೌಪಚಾರಿಕ ಹಣಕಾಸಿನ ವ್ಯವಹಾರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(1), 125–128.

ಆಯ್ಕೆ ಮಾಡಿಕೊಳ್ಳಲಾಗಿದೆ. ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳು ಆದಾಯ ವೃದ್ಧಿ ಮತ್ತು ಉತ್ಪಾದನೆಗೆ ಪೂರಕವಾಗಿದೆ. ಆದರೆ ಈ ಸಂಸ್ಥೆಗಳ ಮೂಲಕ ದೊರೆಯುವ ಸಾಲವನ್ನು ಅಭಿವೃದ್ಧಿ ಚಟುವಟಿಕೆಗಳಿಗೆ ಬಳಸಿಕೊಳ್ಳದೆ ಕುಟುಂಬದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುವುದನ್ನು ಗ್ರಾಮೀಣ ಪ್ರದೇಶದಲ್ಲಿ ಕಾಣಬಹುದಾಗಿದೆ. ಈ ಕಾರಣದಿಂದ ಗ್ರಾಮೀಣ ಜನರು ಸಂಘಟಿತ ಸಂಸ್ಥೆಗಳ ಮೂಲದಿಂದ ಪಡೆದ ಸಾಲವನ್ನು ಆದಾಯ ಪರಿಸ್ಥಿತಿಗಳನ್ನು ಸುಧಾರಿಸಿಕೊಳ್ಳುವಲ್ಲಿ ವಿಫಲರಾಗಿ ಅವಕಾಶ ವಂಚಿತರಾಗುತ್ತಿದ್ದಾರೆ.

ಪಡೆದ ಸಾಲವನ್ನು ಸರಿಯಾಗಿ ಸದುಪಯೋಗ ಮಾಡಿಕೊಳ್ಳದ ಕಾರಣ ಔಪಚಾರಿಕ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. ಆದ ಕಾರಣ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮತ್ತು ಅಭಿವೃದ್ಧಿಕಾರ್ಯಗಳನ್ನು ಹಮ್ಮಿಕೊಳ್ಳಲು ಅಗತ್ಯದ ಸಾಲವನ್ನು ಅನೌಪಚಾರಿಕ ಮೂಲದಿಂದ ಪಡೆಯುವಂತಾಗಿದೆ. ಅತಿಸಣ್ಣ, ಸಣ್ಣ, ಮಧ್ಯಮ ಭೂ ಹಿಡುವಳಿದಾರರು, ಕೃಷಿಕರು ಮತ್ತು ಕೃಷಿ ಕಾರ್ಮಿಕರು ಅತಿ ಹೆಚ್ಚಿನ ಪ್ರಮಾಣದಲ್ಲಿ ಅಸಂಘಟಿತ ಮೂಲದಿಂದ ಸಾಲಪಡೆಯುವುದನ್ನು ಕಾಣಬಹುದಾಗಿದೆ. ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಹಣಕಾಸು ಮಾರುಕಟ್ಟೆಗಳು ಉಳಿತಾಯದಾರರಿಂದ ಪಡೆದ ಸಂಪನ್ಮೂಲಗಳನ್ನು ಅಗತ್ಯವಿರುವರಿಗೆ ಕೊಡುವ ಮೂಲಕ ಉತ್ಪದನಾ ಕ್ಷೇತ್ರಕ್ಕೆ ತಮ್ಮದೇ ಕೊಡುಗೆ ನೀಡುತ್ತಿವೆ. ಇದರಿಂದಾಗಿ ಆರ್ಥಿಕತೆಯಲ್ಲಿ ಅಭಿವೃದ್ಧಿ ಚಟುವಟಿಕೆಗಳು ವೇಗೋತ್ಕರ್ಷ ಪಡೆದುಕೊಳ್ಳುತ್ತಿದ್ದು, ಉತ್ಪಾದನೆ ಮತ್ತು ವಿತರಣೆಯಲ್ಲಿ ಹೆಚ್ಚಳವನ್ನು ಕಾಣ ಬಹುದಾಗಿದೆ. ಸ್ವಾತಂತ್ರ್ಯ ನಂತರ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಗಣನೀಯ ಒತ್ತು ನೀಡುವ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸರ್ಕಾರಗಳು ಹೆಚ್ಚಿನ ಉತ್ತೇಜನ ನೀಡಿತ್ತು. ಅದಾಗ್ಯೂ ಭಾರತದ ಶೇ.70 ಕ್ಕೂ ಹೆಚ್ಚು ಕುಟುಂಬಗಳು ಸಾಲಕ್ಕಾಗಿ ಇಂದಿಗೂ ಅನೌಪಚಾರಿಕ ಹಣಕಾಸಿನ ಮೂಲವನ್ನು ಅವಲಂಬಿಸಿವೆ. ಹಣಕಾಸಿನ ವ್ಯವಸ್ಥೆಯ ಸುಧಾರಣೆಗಳಿಗಾಗಿ ಸರ್ಕಾರಗಳು ಅನೇಕ ಕ್ರಮಗಳನ್ನು ರೂಪಿಸಿ ಸಾಲನೀತಿ ವಲಯವನ್ನು ಬಲಪಡಿಸುವ ಪ್ರಯತ್ನ ಮಾಡಿವೆ. ಸಂಘಟಿತ ಹಣಕಾಸು ಮಾರುಕಟ್ಟೆಗಳ ಮಹತ್ವ ಕಡಿಮೆಯಾಗಿದ್ದರೂ ಭಾರತದ ಆರ್ಥಿಕತೆಯಲ್ಲಿ ಇಂದಿಗೂ ಖಾಸಗಿ ಹಣಕಾಸು ಮಾರುಕಟ್ಟೆ ತನ್ನ ಶಕ್ತಿ ಪ್ರಭಾವವನ್ನು ಉಳಿಸಿಕೊಂಡು ಬಂದಿದೆ. ಸರ್ಕಾರ ಬೃಹತ್ ಪ್ರಮಾಣದ ಸಾಲವನ್ನು ಕೃಷಿ ಕ್ಷೇತ್ರಕ್ಕೆ ಪೂರೈಸುತ್ತಿದೆ. ಹೀಗಾಗಿ ಅಸಂಘಟಿತ ಅಂದರೆ ಖಾಸಗಿ ಲೇವಾದೇವಿಗಾರರ ಭೂ ಮಾಲೀಕರು ಹಾಗೂ ವ್ಯಾಪಾರಸ್ಥರು ನೀಡುವ ಸಾಲ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ ಎನ್ನಲಾಗಿದೆ. ಆದರೆ ಅನೌಪಚಾರಿಕ ಹಣಕಾಸು ವಲಯ ಇಂದಿಗೂ ಸಕ್ರಿಯವಾಗಿದೆ ಈ ವಲಯದ ಸಾಲಗಳನ್ನು ಮತ್ತು ಅವುಗಳ ಪ್ರಯೋಜನವನ್ನು ಸಮಾಜದ ಯಾವ ವರ್ಗಗಳು ಪಡೆದವು? ಪ್ರಯೋಜನಗಳೇನು? ಇದರಿಂದ ಗ್ರಾಮೀಣ ಬಡತನ ನಿವಾರಣೆಯಾಯಿತೆ? ಎಂಬುದೆ ಪ್ರಶ್ನೆಯಾಗಿದೆ. ಆಲ್ ಇಂಡಿಯಾ ರೂರಲ್ ಕ್ರೆಡಿಟ್ ಸರ್ವೆ ಸಮಿತಿ(1954)ಯ ವರದಿಯಲ್ಲಿ ಉಲ್ಲೇಖಿಸಿರುವಂತೆ ಸಾಲ ನೀಡುವವರು ಸಂಪತ್ತನ್ನು ಹೊಂದಿದ್ದಾರೆ. ಈ ಸಮಿತಿಯ ಪ್ರಕಾರ ಸಾಮಾಜಿಕ ನ್ಯಾಯ ಸಮಾನತೆ, ಆರೋಗ್ಯಕರ ಸ್ಪರ್ಧೆಯನ್ನು ಎಲ್ಲಾ ನಾಗರಿಕರಲ್ಲಿ ಕಾಣಬೇಕಾದರೆ ಅದು ಸಹಕಾರ ಚಳುವಳಿಯಿಂದ ಮಾತ್ರ ಸಾಧ್ಯ ಎಂದು ಹೇಳಿದೆ ಹಾಗೂ ಈ ಸಮಿತಿ ನೀಡಿದ ಶಿಫಾರಸ್ಸಿನ ಮೇರೆಗೆ ಆರ್‌ಬಿಐ ಸಹಕಾರಿ ಚಳುವಳಿಗೆ ಸೂಕ್ತ ಕ್ರಮಗಳನ್ನು ತ'ೆಗೆದುಕೊಂಡಿದೆ.

ನರಸಿಂಹಂ ಸಮಿತಿಯ ವರದಿ (1991) ಮೊದಲ ನರಸಿಂಹಂ ಸಮಿತಿಯನ್ನು "Committee on the financial System (CFS) ಎಂದು ಕರೆಯಲಾಗುತ್ತದೆ. ಈ ಸಮಿತಿಯ ಪ್ರಮುಖ

ಉದ್ದೇಶಗಳೆಂದರೆ ಹಣಕಾಸಿನ ವ್ಯವಸ್ಥೆಯ ಕಾರ್ಯವಿಧಾನ, ಕಾರ್ಯಾಚರಣೆ ಮತ್ತು ಸಂಘಟನೆಗೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಪರಶೀಲಿಸಲು ದಕ್ಷತೆ & ಉತ್ಪಾದಕತೆಯನ್ನು ಹೆಚ್ಚಿಸಲು ಸೂಕ್ತ ಸಲಹೆಗಳನ್ನು ನೀಡುವುದಾಗಿತ್ತು. ಈ ಸಮೀತಿಯ ಶಿಫಾರಸ್ಸಿನ ಮೇರೆಗೆ ಎಸ್ಎಲ್ಆರ್ ಅನ್ನು 38.5% ರಿಂದ 25% ರಷ್ಟು ಕಡಿಮೆಗೊಳಿಸಲಾಯಿತು ಮತ್ತು ಸಿಆರ್ಆರ್ ಅನ್ನು 15% ನಿಂದ ಶೇಕಡಾ 3–5% ರಷ್ಟು ಇಳಿಸಲಾಯಿತು. ಗ್ರಾಮೀಣ ಅಭಿವೃದ್ಧಿಗೆ ಮತ್ತು ಕೃಷಿ ಸಾಲಕ್ಕೆ ನಿರ್ದಿಷ್ಟ ಪಡಿಸಿದ ಪ್ರದೇಶಗಳನ್ನು ಮಾತ್ರ ಸ್ಥಳೀಯ ಬ್ಯಾಂಕುಗಳು ಕೇಂದ್ರಿಕರಿಸಬೇಕೆಂದು ಈ ಸ ಮಿತಿ ಸಲಹೆ ನೀಡಿತು. ಆರ್‌ಬಿಐ ಮತ್ತು ಸರ್ಕಾರದ ಉಭಯ ನಿಯಂತ್ರಣದ ಬದಲಾಗಿ ಆರ್‌ಬಿಐ ಭಾರತದಲ್ಲಿನ ಬ್ಯಾಂಕಿಂಗ್ ನಿಯಂತ್ರಿಸುವ ಸಂಸ್ಥೆ ಎಂದು ಈ ಸಮಿತಿಯು ದೃಢವಾಗಿ ಹೇಳಿಕೆ ನೀಡಿತ್ತು. ಅದೇ ರೀತಿ ಸಾರ್ವಜನಿಕ ವಲಯದ ಬ್ಯಾಂಕುಗಳು ಸ್ವತಂತ್ರ್ಯವಾಗಿರಬೇಕು ಎಂದು ಹೇಳಿತು.

ನರಸಿಂಹಂ ಸಮಿತಿಯ ವರದಿ–2 (1998) ಈ ಸಮಿತಿಯನ್ನು ಡಿಸೆಂಬರ್ 1997ರಲ್ಲಿ ನೇಮಕ ಮಾಡಲಾಯಿತು. ಈ ಸಮಿತಿಯನ್ನು "Committee on banking sector reform" ಎಂದು ಕರೆಯಲಾಗುತ್ತದೆ. 1992ರಿಂದ ಬ್ಯಾಂಕಿಂಗ್ ಸುಧಾರಣೆಗಳ ಪ್ರಗತಿ ಹಣಕಾಸು ಸಂಸ್ಥೆಗಳನ್ನು ಬಲಪಡಿಸುವ ಸೂಕ್ತ ಸಲಹೆಗಳನ್ನು ಸೂಚಿಸುವುದು ಈ ಸಮಿಯ ಮೂಲ ಉದ್ದೇಶವಾಗಿತ್ತು. ಈ ಸಮಿತಿಯು ಏಪ್ರಿಲ್ 24, 1998ರಂದು ತನ್ನ ವರದಿಯನ್ನು ಸಲ್ಲಿಸಿತು. ಸಮಿತಿಯು ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಸಮನಾದ ಸ್ವಾಯತ್ತತೆಯನ್ನು ಶಿಫಾರಸ್ಸು ಮಾಡಿತು. ಸಾರ್ವಜನಿಕ ವಲಯದ ಬ್ಯಾಂಕುಗಳು ಹೆಚ್ಚಿನ ಸ್ವಾಯತ್ತತೆಗಾಗಿ ಈ ಬ್ಯಾಂಕುಗಳ ಪಾವತಿಗಳನ್ನು ಇತರೆ ವೃತ್ತಿಪರ ಬ್ಯಾಂಕುಗಳ ಅಭ್ಯಾಸಗಳನ್ನು ಸ್ಥಿರವಾಗಿ ತರಬೇಕು ಎಂದು ಸೂಚಿಸಿತು. ಈ ಸಮಿತಿಯು 17 ಬ್ಯಾಂಕುಗಳ ಸ್ವಾಯತ್ತತೆಯ ಅರ್ಹತೆಯನ್ನು ಮಾರ್ಚ್ 1999ರಲ್ಲಿ ನೀಡಿತು. ಈ ಸಮಿತಿಯ ಶಿಫಾರಸ್ಸಿನ ಮೂಲಕ ಸರ್ಕಾರದ ಹೂಡಿಕೆಯಲ್ಲಿ ಶೇಕಡಾ 33% ರಷ್ಟು ಕಡಿತ ಮತ್ತು ಶೇಕಡಾ 2% ಕ್ಕೂ ಹೆಚ್ಚು ಎನ್.ಪಿ.ಎ ಮೇಲೆ ನಷ್ಟ ಉಂಟಾಗಿರುವ ಶಾಖೆಗಳನ್ನು ಮುಚ್ಚುವುದು ಎಂದು ಸಮಿತಿ ಸಲಹೆ ನೀಡಿತು.

ಮಹಾರಾಷ್ಟ್ರದಲ್ಲಿ ರೈತರ ಆತ್ಮಹತ್ಯೆ ವರದಿ (2006) ಈ ವರದಿಯನ್ನು "ಇಂದಿರಾಗಾಂಧಿ ಇನ್ಸ್ಟ್ಯೂಟ್ ಆಫ್ ಡೆವಲಪ್‌ಮೆಂಟ್ ಆಂಡ್ ರಿಸರ್ಚ್" ಸಂಸ್ಥೆ 116 ಆತ್ಮಹತ್ಯೆ ಪ್ರಕರಣಗಳನ್ನು ವಾರ್ದ್ರಾ, ವಶಂ ಮತ್ತು ಯವತ್ಮಾಳ ಜಿಲ್ಲೆಗಳ 109 ಗ್ರಾಮಗಳಲ್ಲಿ ಸಂದರ್ಶನ ಮಾಡಿವೆ. ಸಾಂಸ್ಥಿಕ & ಸಾಂಸ್ಥಿಕೇತರ ಸಾಲ, ಋಣ ಬಾಕಿಗಳು ರೈತರ ಆತ್ಮಹತ್ಯೆಗೆ ಹೆಚ್ಚಿನ ಕಾರಣವೆಂದು ಈ ವರದಿ ಉಲ್ಲೇಖಿಸಿದೆ. ಈ ಸಂಸ್ಥೆಯ ಅಧ್ಯಯನದ ಆಧಾರದ ಮೇಲೆ ಸಣ್ಣ & ಅತೀ ಸಣ್ಣ ರೈತರು ಹೆಚ್ಚಾಗಿ ಸಾಂಸ್ಥಿಕೇತರ (ಅನೌಪಚಾರಿಕ) ಮೂಲಗಳ ಮೇಲೆ ಅವಲಂಬಿತರಾಗಿದ್ದಾರೆ ಎಂಬುದು ಸಾಭೀತಾಗಿದೆ.

ಕೃಷಿ ಋಣಬಾರದ ಮೇಲೆ ತಜ್ಞರ ಗುಂಪಿನ ವರದಿ (2007) ಈ ತಜ್ಞರ ಗುಂಪನ್ನು ಜುಲೈ 2007 ರಲ್ಲಿ ಆರ್.ರಾಧಾಕೃಷ್ಣನ್ ಅಧ್ಯಕ್ಷತೆಯಲ್ಲಿ ಆರ್ಥಿಕ ವ್ಯವಹಾರಗಳ ಇಲಾಖೆ ಮತ್ತು ಹಣಕಾಸು ಇಲಾಖೆ ಸ್ಥಾಪಿಸಿತು. ಈ ವರದಿಯ ಪ್ರಕಾರ ಕೃಷಿ ಸಾಲ ಮತ್ತು ಗ್ರಾಮೀಣ ಸಾಲ ವ್ಯವಸ್ಥೆಯ ಅಭಿವೃದ್ಧಿ ಹೊಂದಿದರೂ ರೈತರು ಈಗಲೂ ಭಾಗಶಃ ಸಾಂಸ್ಥಿಕೇತರ ಮೂಲಗಳನ್ನು ಅವಲಂಬಿತರಾಗಿದ್ದಾರೆ. ಮತ್ತು ಅಲ್ಲಿ ಹೆಚ್ಚಿನ ಬಡ್ಡಿದರ ಮತ್ತು ಷರತ್ತುಗಳನ್ನು ಹೆಚ್ಚಾಗಿ ಬಳಸಿಕೊಳ್ಳುತ್ತವೆ. ಆದ್ದರಿಂದ ರೈತರ ಆತ್ಮಕತೆಗಳನ್ನು ಕಡಿಮೆ ಮಾಡಲು ಸಾಲ ಮರುಪಾವತಿ ನಿಧಿಯನ್ನು ಸ್ಥಾಪಿಸಬೇಕೆಂದು ಸಲಹೆ ನೀಡಿತು.

ರೈತರ ಆತ್ಮಹತ್ಯೆ ಮತ್ತು ಸಾಲ ಮನ್ನಾ ವರದಿ (2008) ಡಾ. ನರೇಂದ್ರ ಜಾದವ್ ಉಪಕುಲಪತಿ

ಪುಣೆ ವಿಶ್ವವಿದ್ಯಾಲಯ ಇವರ ವರದಿಯಲ್ಲಿ ಸಾಲ ಮನ್ನಾ ರೈತರ ದುಃಖಕ್ಕೆ ಅಸಮರ್ಪಕ ಪರಿಹಾರವಾಗಿರಬಾರದು ಆದರೆ ಕೆಲವೊಂದು ಪರಿಸ್ಥಿತಿಯಲ್ಲಿ ಸಾಲ ಮನ್ನಾ ಅವಶ್ಯಕವಾಗಿದೆ. ಆದರೆ ಅದು ಸಾಕಾಗುವುದಿಲ್ಲ ಎಂದು ವಿವರಿಸಿದ್ದಾರೆ. ಇವರ ಅಭಿಪ್ರಾಯದ ಪ್ರಕಾರ ಅಸ್ಥಿತ್ವದಲ್ಲಿರುವ ಕೃಷಿ ಸಾಲದ ವ್ಯವಸ್ಥೆಗೆ ಪರ್ಯಾಯ ವ್ಯವಸ್ಥೆ ಸ್ಥಾಪಿಸಿ ಪ್ರತಿಯೊಂದು ಗ್ರಾಮ "Money lender – free village" ನ ಸೃಷ್ಟಿಗೆ ಸಲಹೆ ನೀಡಿದರು. ಇದನ್ನು ಸ್ಥಾಪಿಸಲು ಪ್ರತಿಯೊಂದು ಕುಟುಂಬದ ಕನಿಷ್ಟ ಒಂದು ಸದಸ್ಯ ಸ ್ವ-ಸಹಾಯ ಗುಂಪಿನ ಸದಸ್ಯನಾಗಬೇಕು. ಆಗ ಗ್ರಾಮ ಪ್ರತಿಶತ 100ರಷ್ಟು ಆರ್ಥಿಕ ಸೇರ್ಪಡೆ ಸಾಧಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಡಿ.ಸುಬ್ಬರಾವ್, ಆರ್.ಬಿ.ಐ ಗೌರ್ನರ್ (2012) ಇವರು ಮುಂಬೈನಲ್ಲಿ ನಡೆದ ನಬಾರ್ಡ್‌ನ 20ನೇ ವಾರ್ಷಿಕೋತ್ಸವದ ಆಚರಣೆ ಸಂದರ್ಭದಲ್ಲಿ ನೀಡಿದ ಉಪನ್ಯಾಸದಲ್ಲಿ "ಎಲ್ಲವನ್ನು ನಿರ್ಲಕ್ಷಿಸಬಹುದು ಆದರೆ ಕೃಷಿಯನ್ನಲ್ಲ" ಎಂದು ದೃಢವಾಗಿ ವ್ಯಾಖ್ಯಾನಿಸಿದ್ದಾರೆ. ಅಲ್ಲದೆ ಅವರ ಭಾಷಣದಲ್ಲಿ ಬಡತನವನ್ನು ಕಡಿಮೆ ಮಾಡಬೇಕಾದರೆ ಕೃಷಿ ಬೆಳವಣಿಗೆಯೇ ಮುಖ್ಯ ಕೇಂದ್ರವಾಗಿದೆ ಎಂದು ಒತ್ತಿ ಹೇಳಿದರು. ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳಲು ಉತ್ಪಾದಕತೆ ಹೆಚ್ಚಿಸಲು ಸಕಾಲಿಕವಾಗಿ ಮತ್ತು ಅಗ್ಗದ ಸಾಲದ ಅವಶ್ಯಕತೆ ಇದೆ. ಸಾಲ ವ್ಯವಸ್ಥೆ ಅಭಿವೃದ್ಧಿ ಅನುಭವದ ಒಂದು ಮುಖ್ಯ ಸೂಚ್ಯಂಕವಾಗಿವೆ ಎಂದು ವಿವರಿಸಿದ್ದಾರೆ. ಆರ್.ಬಿ.ಐ – ಗ್ರಾಮೀಣ ವಲಯದಲ್ಲಿ ಅನೌಪಚಾರಿಕ ಸಾಲದ ನಿರಂತರತೆ ಈ ಸಮೀಕ್ಷೆಯ ವರದಿಯಲ್ಲಿ ಅನೌಪಚಾರಿಕ ಗ್ರಾಮೀಣ ಸಾಲದ ಮಾರುಕಟ್ಟೆ ಮುಂದುವರಿಕೆಗೆ ಪ್ರಮುಖ ಕಾರಣವೆಂದರೆ ಅಸ್ಥಿತ್ವದಲ್ಲಿರುವ ಹಣಕಾಸಿನ ಸಂಸ್ಥೆಗಳ ಸಾಲ ನೀಡಿಕೆಯ ಕಠಿಣ ಪ್ರವೃತ್ತಿಗಳು ಇದರಿಂದಾಗಿ ಗ್ರಾಮೀಣ ಜನರು ಅನೌಪಚಾರಿಕ ಸಾಲದ ಬಡ್ಡಿದರಗಳು ಹೆಚ್ಚಾಗಿದ್ದರೂ ಈ ಮೂಲಗಳನ್ನೇ ಬಯಸುತ್ತಾರೆಂದು ಮತ್ತು ಸಾಮಾನ್ಯವಾಗಿ ಮದುವೆ ಮತ್ತು ದಾವೆ ಮುಂತಾದ ಉದ್ದೇಶಗಳಿಗೆ ಅನೌಪಚಾರಿಕ ಮೂಲಗಳಿಂದ ಸಾಲಗಳನ್ನು ಪಡೆಯಲು ಆಸಕ್ತರಾಗಿದ್ದಾರೆಂದು ಈ ವರದಿಯಲ್ಲಿ ವಿವರಿಸಿದ್ದಾರೆ. ಉಪಸಂಹಾರ ಕಾರ್ಪೋರೇಟಗಳಿಗೆ, ಶ್ರೀಮಂತ ರೈತರಿಗೆ, ಬಂಡವಾಳಶಾಹಿ ಕೃಷಿಕರಿಗೆ, ಹೆಚ್ಚು ಹೆಚ್ಚು ಸಾಲ ಅಗತ್ಯತೆಗಳನ್ನು ಪೂರೈಸಲು ಆಸಕ್ತಿ ವಹಿಸುವ ವಾಣಿಜ್ಯ ಬ್ಯಾಂಕಗಳು ಬಡವರ, ಕೂಲಿ ಕಾರ್ಮಿಕರ, ಅತಿಸಣ್ಣ ರೈತವರ್ಗಗಳ ಹಣಕಾಸಿನ ಅಗತ್ಯತೆಗಳನ್ನು ಪೂರೈಸಲು ಆಸಕ್ತಿ ವಹಿಸುವದಿಲ್ಲ. ಆದ್ದರಿಂದ ಇಂದಿಗೂ ಅನೌಪಚಾರಿಕ ಸಾಲದ ಮಾರುಕಟ್ಟೆ ಪ್ರಬಲವಾಗಿರಲು ಸಂಘಟಿತ ವಲಯದ ಸಂಕೀರ್ಣ ಸಾಲ ನಿಯಮಗಳೇ ಕಾರಣ ಎನ್ನಬಹುದು.

**ಪರಾಮರ್ಶನ ಗ್ರಂಥಗಳು**


- ಅಮೃತ್ ಜೋಗಿ. (2009). *ಮುಹಮ್ಮದ್ ಯೂನಸ್-ಸಣ್ಣ ಸಾಲಗಳ ಹರಿಕಾರ.* ವಸಂತ ಪ್ರಕಾಶನ.
- ಗೌತಮ ಪುರಕಾಯಸ್ತ. (2008). *ರೂರಲ್ ಕ್ರೆಡಿಟ್ ಇನ್ ಡಿಸಾರೆ.* ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕಾನಮಿಕ್ ಚೇಂಜ್.
- ಮಹಾರಾಷ್ಟ್ರದಲ್ಲಿ ರೈತರ ಆತ್ಮಹತ್ಯೆ ವರದಿ. (2006). ಇಂದಿರಾ ಗಾಂಧಿ ಇನ್ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಅಂಡ್ ರಿಸರ್ಚ್.
- ನರೇಂದ್ರ ಜಾದವ್. (2008). ರೈತರ ಆತ್ಮಹತ್ಯೆ ಮತ್ತು ಸಾಲ ಮನ್ನಾ. ಪುಣೆ ವಿಶ್ವವಿದ್ಯಾಲಯ.
- Adams, D. W., & Fitchett, D. A. (2019). Informal Finance in Low-Income Countries. Routledge.
- Bell, C. (1990). Interactions between Institutional and Informal Credit Agencies in Rural India. The World Bank Economic Review, 4(3), 297–327.
- Gruère, G. P., & Sengupta, D. (2011). BT Cotton and Farmer Suicides in India: An Evidence-based Assessment. Journal of Development Studies, 47(2), 316–337.